ಕರ್ನಾಟಕ ವಿಧಾನ ಸಭೆ, ಸಂಶೋಧನಾ ಹಾಗೂ ಉಲ್ಲೇಖನಾ ಶಾಖೆ
KARNATAKA LEGISLATIVE ASSEMBLY RESEARCH AND REFERENCE BRANCH

ಪತ್ರಿಕಾ ತುಣುಕುಗಳು
PAPER CLIPPINGS

ಇಲಾಖೆ / ವಿಷಯ: DEPARTMENT / SUBJECT: ಕರ್ನಾಟಕ ವಿಧಾನ ಸಭೆ ಅಧಿವೇಶನ

ಪತ್ರಿಕೆಯ ಹೆಸರು : NAME OF THE NEWS PAPER : ಉದಯವಾಣಿ    ದಿನಾಂಕ : DATE : 19/07/2019

# ಸದನದ ಗ್ಯಾಲರಿಯಲ್ಲಿ ರಾಜ್ಯಪಾಲರ ಪ್ರತಿನಿಧಿ

ಉವಾ 19/7/19

## ವಿಧಾನಸಭೆ ಕಲಾಪದ ಮೇಲೆ ಗವರ್ನರ್ ನಿಗಾ

**ವಿಧಾನಸಭೆ:** ವಿಧಾನಸಭೆಯಲ್ಲಿ ಗುರುವಾರ ನಡೆದ ವಿಶ್ವಾಸ ಮತಯಾಚನೆ ಕುರಿತಂತೆ ನಡೆದ ಇಡೀ ಕಾರ್ಯಕಲಾಪದ ಮೇಲೆ ರಾಜ್ಯಪಾಲರು ನಿಗಾವಹಿಸಿದ್ದು, ರಾಜ್ಯಪಾಲ ಪ್ರತಿನಿಧಿಯೊಬ್ಬರು ಅಧಿಕಾರಿಗಳ ಗ್ಯಾಲರಿಯಲ್ಲಿ ಕುಳಿತು ಸದನದಲ್ಲಿನ ಚರ್ಚೆಗಳನ್ನು ವೀಕ್ಷಿಸಿದರು. ರಾಜಭವನದ ಅಧಿಕಾರಿ ರಮೇಶ್ ಎಂಬುವವರು ಸದನಕ್ಕೆ ಆಗಮಿಸಿ ಚರ್ಚೆಯನ್ನು ಗಮನಿಸಿದರು. ಅಧಿವೇಶನದಲ್ಲಿ ನಡೆಯುವ ಚರ್ಚೆಗಳ ವಿವರ ಮತ್ತು ಘಟನೆಗಳ ಕುರಿತು ಮಾಹಿತಿ ನೀಡುವಂತೆ ರಾಜ್ಯಪಾಲರು ಸೂಚನೆ ನೀಡಿದ್ದರಿಂದ ಅಧಿಕಾರಿ ಆಗಮಿಸಿದ್ದರು ಎಂದು ಮೂಲಗಳು ತಿಳಿಸಿವೆ. ರಾಜ್ಯ ಮುಖ್ಯ ಕಾರ್ಯದರ್ಶಿಯ ಪಕ್ಕ ಕುಳಿತು ಕಾರ್ಯಕಲಾಪಗಳನ್ನು ಗಮನಿಸಿದರು. ಬೆಳಗ್ಗೆಯಿಂದ ಸಂಜೆ ಸದನ ಮುಂದೂಡಿಕೆಯಾಗುವವರೆಗೆ ಅಧಿಕಾರಿಗಳ ಗ್ಯಾಲರಿಯಲ್ಲಿ ಕುಳಿತು ರಾಜಭವನದ ಅಧಿಕಾರಿ ನಡೆದ ಚರ್ಚೆಯ ಸ್ವರೂಪ, ವಾದ-ವಿವಾದ, ಸಭಾಧ್ಯಕ್ಷರ ನಡೆ, ಆಡಳಿತ ಪಕ್ಷ ಮತ್ತು ಪ್ರತಿಪಕ್ಷದ ನಾಯಕರ ಪ್ರಸ್ತಾಪಿಸದ ವಿಷಯದ ಬಗ್ಗೆ ಮಾಹಿತಿಯನ್ನು ಕ್ರೋಢೀಕರಿಸಿ ವರದಿ ಸಲ್ಲಿಸಿದರೆಂದು ಹೇಳಲಾಗಿದೆ.


ರಾಮುಲು ಜತೆ ಗೌರ್ನರ್ ಪ್ರತಿನಿಧಿ ಚರ್ಚೆ

7